**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5022/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಆನಂದ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಆಲಗೂಡನಾಯಕ | **27.03.2026** |
| **ವಯಸ್ಸು** | : | 31 ವರ್ಷ | |
| **ವೃತ್ತಿ** | : | ಪೋಲಿಸ್ ಪೇದೆ, ಪೂರ್ವ ಠಾಣೆ ಚಾ.ನಗರ | **ಪ್ರಾ.ಸಾಃ 17** |
| **ವಾಸ ಸ್ಥಳ** | : | ಚಾ.ನಗರ | **ಚಾ.ಸಾಃ 35** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು 2023 ರಿಂದ ಆಗಸ್ಟ್ 2025 ರವರೆಗೆ ಕೊಳ್ಳೇಗಾಲ ಪಟ್ಟಣ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 04.03.2025ರಂದು ಮದ್ಯಾಹ್ನ 2.45 ಗಂಟೆ ಸಮಯದಲ್ಲಿ ಚಾಸಾ 45 ರವರು ನನ್ನನ್ನು ಮತ್ತು ಚಾಸಾ 36 ರವರನ್ನು ಪಿಸ್ ಪಾರ್ಕ ರಸ್ತೆಯಲ್ಲಿ ಚೆನ್ನಮ್ಮ ಲಾಡ್ಜ್ ಗೆ ಹೋಗಿ ಅಲ್ಲಿ ಯಾರೋ ಒಬ್ಬ ಅಸಾಮಿಯನ್ನು ಚಾಕುವಿನಿಂದ ಚುಚ್ಚಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂದು ತಿಳಿಸಿದರು. ನಾವು ಮದ್ಯಾಹ್ನ 3.00 ಗಂಟೆಗೆ ಸದರಿ ಸ್ಥಳಕ್ಕೆ ಹೊದೆವು. ಸದರಿ ಚೆನ್ನಮ್ಮ ಲಾಡ್ಜ್ ನ 1 ನೇ ಮಹಡಿಯ ಪ್ಯಾಸೇಜ್ ನಲ್ಲಿ ಒಬ್ಬ ವ್ಯಕ್ತಿ ಬಿದ್ದಿದ್ದನು. ಆತನ ಹೊಟ್ಟೆಯ ಹೊಕ್ಕಳಿನ ಭಾಗದಲ್ಲಿ ಗಾಯವಾಗಿತ್ತು. ಆತ ನೀರು ಬೇಕು ಎಂದು ಕೇಳಿದನು. ನಾವು ಆತನಿಗೆ ನೀರು ಕೊಟ್ಟೆವು. ಆತ ಕೂಲಿ ವಿಚಾರದಲ್ಲಿ

ಮಣಿ ಎಂಬ ವ್ಯಕ್ತಿ ನನಗೆ ಚಾಕುವಿನಿಂದ ಚುಚ್ಚಿದನು ಎಂದು ತಿಳಿಸಿದನು. ಸ್ಥಳಕ್ಕೆ ತುರ್ತು ಚಿಕಿತ್ಸಾ ವಾಹವನ್ನು ಬರಮಾಡಿಕೊಂಡು ಆತನನ್ನು ಕೊಳ್ಳೇಗಾಲದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದೆವು. ನಂತರ ಆತನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದುಕೊಂಡು ಹೋದೆ. ಸದರಿ ವ್ಯಕ್ತಿಯ ಕಡೆಯವರು ಯಾರು ಇಲ್ಲದ ಕಾರಣ ಚಾಸಾ 45 ರವರ ಆದೇಶದಂತೆ ನಾನು ಸದರಿ ವ್ಯಕ್ತಿಯನ್ನು ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಸದರಿ ವ್ಯವಕ್ತಿಯನ್ನು ದಾಖಲು ಮಾಡಿರುತ್ತೇನೆ. ಆ ದಿನ ರಾತ್ರಿ 9.00 ಗಂಟೆಗೆ ನಾನು ಆಸ್ಪತ್ರೆಯಿಂದ ಹಿಂದುರುಗಿ ಬಂದಿರುತ್ತೇನೆ. ಚಾಸಾ 34 ರವರು ಸದರಿ ವ್ಯಕ್ತಿಯೊಂದಿಗೆ ಇದ್ದರು. ಸದರಿ ವ್ಯಕ್ತಿ ಮೃತಪಟ್ಟಿದ್ದಾನೆ ಎಂದು ನನಗೆ ನಂತರ ಗೊತ್ತಾಯಿತು. ನಾನು ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿ ಭಾವಚಿತ್ರದಲ್ಲಿ ತಾನು ವ್ಯಕ್ತಿಯನ್ನು ನೋಡಿದ ಸ್ಥಳ ಮತ್ತು ವ್ಯಕ್ತಿಯನ್ನು ಗುರುತಿಸಿರುತ್ತಾರೆ. ಭಾವಚಿತ್ರಗಳನ್ನು 3 ರಿಂದ 6 ಈಗಾಗಲೇ ಗುರುತಿಸಲಾಗಿದೆ.

**<u>ಪಾಟೀ ಸವಾಲುಃ- ಶ್ರೀ ಸಿ.ಆರ್ ವಕೀಲರಿಂದ</u>**

ನಾನು ಆ ದಿನ ಬೆಳಗ್ಗೆ **8.00** ಗಂಟೆಯಿಂದ ಠಾಣಾ ಕರ್ತವ್ಯದಲ್ಲಿದ್ದೆ. ಆ ದಿನ ಯಾರು ಠಾಣಾಧಿಕಾರಿ ಆಗಿದ್ದರು ಎಂದು ನನಗೆ ನೆನಪಿಲ್ಲ. ದಿಃ **05.03.2025** ರಂದು ನಾನು ಹೇಳಿಕೆ ಕೊಟ್ಟಿರುತ್ತೇನೆ. ಚಾಸಾ **43** ರವರು ಹೇಳಿಕೆಯನ್ನು ಬೆರಳಚ್ಚು ಮಾಡಿದರು. ಚಾಸಾ **46** ರವರು ಹೇಳಿದಂತೆ ಹೇಳಿಕೆಯನ್ನು ಬೆರಳಚ್ಚು ಮಾಡಿದರು. ಠಾಣೆಯಿಂದ ಚೆನ್ನಮ್ಮ ಲಾಡ್ಜ್ ಸುಮಾರು **300** ಮೀ. ಅಂತರ ಇರುತ್ತದೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ **4-5** ಜನ ಸೇರಿದ್ದರು. ನಾನು ಅವರು ಯಾರು ಯಾರು ಎಂದು ವಿಚಾರ ಮಾಡಲಿಲ್ಲ. ಲಾಡ್ಜ್ ಅನ್ನು ನೋಡಿಕೊಳ್ಳುತ್ತಿದ್ದ ವ್ಯಕ್ತಿ ಇದ್ದರು ಅವರ ಹೆಸರು ಗೊತ್ತಿಲ್ಲ. ನಾನು ಆ ದಿನ ಚೆನ್ನಮ್ಮ ಲಾಡ್ಜ್ ಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸಾರ್ವಜನಿಕರ ಸಹಾಯದಿದಂದ ಆ ವ್ಯಕ್ತಿಯನ್ನು ತುರ್ತು ಚಿಕಿತ್ಸಾ ವಾಹನಕ್ಕೆ ಸಾಗಿಸಿರುತ್ತೇನೆ. ಭಾವಚಿತ್ರದಲ್ಲಿ ಚಾಸಾ **36** ರವರು ಕಾಣಿಸುವುದಿಲ್ಲ. ಭಾವಚಿತ್ರದಲ್ಲಿರುವ ಮತ್ತೊಬ್ಬ ಖಾಸಗಿ ವ್ಯಕ್ತಿ ಯಾರು ಎಂದು ಗೊತ್ತಿಲ್ಲ. ಆ ದಿನ ಅಲ್ಲಿ

ಗಾಯಗೊಂಡ ವ್ಯಕ್ತಿ ನನಗೆ ಯಾವುದೇ ವಿಚಾರವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಕೆ.ಆರ್ ಆಸ್ಪತ್ರೆಯಿಂದ ಸದರಿ ವ್ಯಕ್ತಿಯನ್ನು ದಾಖಲು ಮಾಡಿದಾಗ, ಯಾವುದೇ ದಾಖಲಾತಿಯನ್ನು ಪಡೆದಿರುವುದಿಲ್ಲ. ನಾನು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ

**ಸಾಕ್ಷಿಯನ್ನು ದಿಃ 27.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನಾನು ಸ್ಥಳಕ್ಕೆ ಹೋದಾಗ ನನ್ನ ಬಾಬ್ತು ಮೊಬೈಲ್ ಮೂಲಕ ವ್ಯಕ್ತಿ ಬಿದ್ದಿದ್ದ ಸ್ಥಳದ ಮತ್ತು ವ್ಯಕಕ್ತಿಯ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ನಂತರ ಸದರಿ ಭಾವಚಿತ್ರಗಳನ್ನು ನಮ್ಮ ಇಲಾಖಾ ಕಂಪ್ಯೂಟರ್ ಗೆ ವರ್ಗಾಯಿಸಿರುತ್ತೇನೆ. ಭಾವಚಿತ್ರಗಳನ್ನು ನಿಪಿ 3 ರಿಂದ 6 ಎಂದು ಈಗಾಗಲೇ ಗುರುತಿಸಲಾಗಿದೆ. ಈ ಬಗ್ಗೆ ಭಾರತೀಯ ಸಾಕ್ಷಿ ಅಧಿನಿಯಮ ಕಲಂ 63(4)(ಸಿ) ರಂತೆ ದೃಢಿಕರಣವನ್ನು ನೀಡಿರುತ್ತೇನೆ. ದೃಢಿಕರಣವನ್ನು ನಿಪಿ 48 ಎಂದು, ಸಾಕ್ಷಿ ಸಹಿಯನ್ನು ನಿಪಿ 48(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಸಿ.ಆರ್ ವಕೀಲರಿಂದ**

ನಿಪಿ 48 ರಲ್ಲಿ ನನ್ನ ಮೊಬೈಲ್ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ. ಕಂಪ್ಯೂಟರ್ ಬಗ್ಗೆ ವಿವರಗಳನ್ನು ನಿಪಿ 48 ರಲ್ಲಿ ನಮೂದು ಮಾಡಿರುವುದಿಲ್ಲ. ನಾನು ಭಾವಚಿತ್ರಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.